ದಿನಾಂಕಃ 23-06-2015

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಶ್ರೀ ಜಿ ಬಿ ಹೆಚ್ ವಕೀಲರಿಂದ

ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಾಂಗ ಮಾಡಿದ್ದೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟ ಪಹಣಿ ಮತ್ತು ಎಮ್ ಆರ್ ಅನ್ನು ನೋಡಿದ್ದು ಅವು ಸರಿಯಾಗಿದ್ದವು, ಇವುಗಳನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆ ನೋಡಿಲ್ಲ ಎಂದರೆ ಸರಿ.

ದಾವಾ ಆಸ್ತಿ 1 ನೇ ಪ್ರತಿವಾದಿಗೆ ಹೇಗೆ ಬಂತು ಎಂದರೆ ಸಾಕ್ಷಿದಾರರು ಪಿತ್ರಾರ್ಜಿತವಾಗಿ ಬಂದಿದೆ ಎಂದು ನುಡಿದಿರುತ್ತಾರೆ. ಪಿತ್ರಾರ್ಜಿತ ಆಸ್ತಿ ಎಂದು ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿದರರು ನಾನು ಪಕ್ಕದ ಊರಿನವನಿದ್ದು, ದಾವಾ ಆಸ್ತಿ 1 ನೇ ಪ್ರತಿವಾದಿಯ ಗಂಡನ ಹೆಸರಿನಿಂದ, ಆತನ ಮರಣಾನಂತರ 1 ನೇ ಪ್ರತಿವಾದಿಗೆ ಬಂದಿದೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವಿಸ್ ಇನಾಂ ಜಮೀನು ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೂ ಅದು ಪಿತ್ರಾರ್ಜಿತ ಆಸ್ತಿ ಎಂದು ನುಡಿದಿರುತ್ತಾರೆ.

ದಾವಾ ಆಸ್ತಿಯ ಮಾರಾಟದ ವ್ಯವಹಾರಕ್ಕೆ ವಾದಿ ಪ್ರತಿವಾದಿಯರ ಸಂಬಂಧಿಕರು ಬಂದಿರಲಿಲ್ಲ, ಸಾಕ್ಷಿ ಮುಂದುವರೆದು ಪ್ರತಿವಾದಿ 1 ಮತ್ತು 2 ರವರು ಬಂದಿದ್ದರು ಎಂದು ನುಡಿದಿರುತ್ತಾರೆ. ಸದರಿ ಮಾರಾಟದ ವ್ಯವಹಾರಕ್ಕೆ ಯಮ್ಮದೊರೆ ಗ್ರಾಮದ ರಘು ಎನ್ನುವವರು ಬಂದಿದ್ದರು. ಸದರಿ ಮಾರಾಟದ ಮಾತುಕತೆಯು ದಿನಾಂಕ : 26-06-2006 ರಂದು ಪಟ್ಟನಾಯಕನಹಳ್ಳಿ ಗ್ರಾಮದಲ್ಲಿ ನಡೆದಿರುತ್ತದೆ. ಸದರಿ ಮಾತು ಕತೆ ನಡೆದಾಗ ಸಮಯ ಮದ್ಯಾಹ್ನ 12-30 ರಿಂದ 1-00 ಗಂಟೆಯಾಗಿತ್ತು. ಯಾವ ಆಧಾರದ ಮೇಲೆ ದಾವಾ ಆಸ್ತಿಯ ಮೌಲ್ಯವನ್ನು ನಿರ್ದರಿಸಲಾಯಿತು ಎಂದರೆ ಸಾಕ್ಷಿದಾರರು ಸದರಿ ಸ್ಥಳದಲ್ಲಿನ ವ್ಯಾಪಾರ ಹೇಗಿತ್ತು ಅದಕ್ಕೆ ಅನುಗುಣವಾಗಿ ದರ ನಿಗದಿ ಮಾಡಲಾಯಿತು ಎಂದು ನುಡಿದಿರುತ್ತಾರೆ.

ಯಾವ ಕಾರಣಕ್ಕಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರತಿವಾದಿಯರು ವ್ಯವಸಾಯದಿಂದ ಜೀವನ ಸಾಗಿಸುತ್ತಾರೆ ಎಂದರೆ ಸರಿ. ದಾವಾ ಆಸ್ತಿಯೇ ಪ್ರತಿವಾದಿಯರ ಜೀವನಕ್ಕೆ ಆಧಾರ ಎಂದರೆ ಸಾಕ್ಷಿದಾರರು 1 ನೇ ಪ್ರತಿವಾದಿ 2 ನೇ ಪ್ರತಿವಾದಿಯರ ಮನೆಯಲ್ಲಿ ವಾಸವಿದ್ದರು ಎಂದು ನುಡಿದಿರುತ್ತಾರೆ.

ದಾವಾ ಆಸ್ತಿಯ ಮಾರಾಟದ ಮಾತುಕತೆ ಸುಮಾರು 1 ಗಂಟೆಗಳ ಅವಧಿಯಲ್ಲಿ ಮುಗಿದಿರುತ್ತದೆ. ಅಂದೇ ಕರಾರು ಬರೆಯಲಾಯಿತು. 100 ರೂ. ಮೌಲ್ಯದ ಚಾಪಾ ಕಾಗದವನ್ನು 1 ನೇ ಪ್ರತಿವಾದಿ ತಂದಿರುತ್ತಾರೆ. 100 ರೂ. ಮೌಲ್ಯದ ಚಾಪಾ ಕಾಗದ ತರುವಂತೆ ಸ್ಟ್ಯಾಂಪ್ ವೆಂಡರ್ ಹೇಳಿರುತ್ತಾರೆ. ಸದರಿ ಪತ್ರದ ಮೇಲೆ ಕೈ ಬರವಣಿಗೆ ಮಾಡಿದ್ದಾರೋ ಅಥವಾ ಟೈಪ್ ಮಾಡಿಸಿದ್ದಾರೋ ನನಗೆ ಗೊತ್ತಿಲ್ಲ. ನಿಪಿ- 1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಎಷ್ಟು ಮೌಲ್ಯಕ್ಕೆ ನಿಗಧಿಯಾಯಿತು ಎಷ್ಟು ಹಣ ಕೊಟ್ಟರು ಬಾಕಿ ಎಷ್ಟು ಕೊಡಬೇಕು ಎಂದೆಲ್ಲಾ ಬಗ್ಗೆ ಬರೆಯಲಾಯಿತು ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯನ್ನು 1 ಲಕ್ಷದ 81 ಸಾವಿರದ 500 ರೂ.ಗಳಿಗೆ ಮಾರಾಟ ಮಾಡಲು ತೀರ್ಮಾನವಾಯಿತು. ಸದರಿ ಕಾರಾರಿನ ದಿನದಂದು 10.000 ರೂ.ಗಳನ್ನು ಪ್ರತಿವಾದಿಗೆ ಕೊಡಲಾಗಿದೆ. ಸದರಿ 10.000 ಸಾವಿರ ರೂ.ಗಳು 100 ರೂ. ಮುಖ ಬೆಲೆಯ ನೋಟುಗಳು. ನಿಪಿ- 1 ನ್ನು ಬರೆಯುವ ಕಾಲದಲ್ಲಿ ನಾನು ಮತ್ತು ರಘು ಹಾಜರಿದ್ದೆವು.

ನಿಪಿ- 1 ನ್ನು ಬರೆಯುವ ಕಾಲದಲ್ಲಿ ಪ್ರತಿವಾದಿಯರ ಪರವಾಗಿ ಯಾರು ಹಾಜರಿದ್ದರು ಎಂದರೆ 2 ನೇ ಪ್ರತಿವಾದಿಯ ಗಂಡ ಹಾಜರಿದ್ದ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಯ ಗಂಡ ನಿಪಿ- 1 ಕ್ಕೆ ಸಹಿ ಮಾಡಿಲ್ಲ. ನಿಪಿ- 1 ನ್ನು ಬರೆಯಲು 1 ಗಂಟೆಗಳ ಸಮಯ ಆಗಿರುತ್ತದೆ. ನಿಪಿ- 1 ಕ್ಕೆ 1 ನೇ ಪ್ರತಿವಾದಿ ಸಹಿ ಹಾಕಿರುತ್ತಾರೆ. ನಿಪಿ- 1 ಕ್ಕೆ ಯಾರೂ ಸಹ ಎಬ್ಬೆಟ್ಟಿನ ಗುರುತು ಹಾಕಿಲ್ಲ. ನಿಪಿ- 1 ಕ್ಕೆ ನಾನು ಮತ್ತು ರಘು ಸಾಕ್ಷಿದಾರರಾಗಿ ಸಹಿ ಮಾಡಿದ್ದೇವೆ. ರಘು ರವರು ಕನ್ನಡದಲ್ಲಿ ಸಹಿ ಮಾಡಿದ್ದಾರೆ. ನಿಪಿ- 1 ನ್ನು ಈಶ್ವರರಾವ್ ಎನ್ನುವವರು ಬರೆದಿರುತ್ತಾರೆ. ಸದರಿ ಈಶ್ವರರಾವ್‌ರವರು ನನಗೆ ಪರಿಚಯವಿಲ್ಲ. ನಿಪಿ- 1 ನ್ನು ಬರೆಯಲು ಈಶ್ವರ್‌ರಾವ್ ರವರಿಗೆ ಯಾರು ಹೇಳಿದರು ಎಂದರೆ ಸಾಕ್ಷಿದಾರರು ರಘುರವರು ಕರೆದುಕೊಂಡು ಬಂದು ಬರೆಸಿದ್ದಾರೆ ಎಂದು ನುಡಿದಿರುತ್ತಾರೆ,

1 ನೇ ಪ್ರತಿವಾದಿ ಪಟ್ಟನಾಯಕನಹಳ್ಳಿಯಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿದಾರರು ಆಗ ಪಟ್ಟನಾಯಕನಹಳ್ಳಿಯಲ್ಲಿ ವಾದಿವಿದ್ದರು ಎಂದು ನುಡಿದಿರುತ್ತಾರೆ. ಪತ್ರ ಬರೆಯುವ ಕಾಲಕ್ಕೆ

ಪಟ್ಟನಾಯಕನಹಳ್ಳಿಯಿಂದ ಬೇರೆ ಯಾರೂ ಬಂದಿರಲಿಲ್ಲ. ನಿಪಿ- 1 ರಲ್ಲಿ 1 ನೇ ಪ್ರತಿವಾದಿಯ ವಾಸಸ್ಥಳವನ್ನು ಯಮ್‌ದೊರೆ ಎಂದು ಬರೆಸಲಾಯಿತು. 2 ನೇ ಪ್ರತಿವಾದಿಯ ವಾಸಸ್ಥಳ ಯಾವುದು ಎಂದು ನಿಪಿ- 1 ರಲ್ಲಿ ಬರೆಯಿಸಿಲ್ಲ. 2 ನೇ ಪ್ರತಿವಾದಿ ನಿಪಿ- 1 ಕ್ಕೆ ಸಹಿ ಮಾಡಿದ್ದಾರೆ. 2 ನೇ ಪ್ರತಿವಾದಿಯ ಹೆಸರು ನನಗೆ ಗೊತ್ತಿಲ್ಲ.

ನನಗೆ ಪ್ರತಿವಾದಿಯರ ಪರಿಚಯವಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಗಂಡನ ಹೆಸರು ನೆನಪಿಲ್ಲ. ಸಾಕ್ಷಿ ಮುಂದುವರೆದು ಬೊಮ್ಮಣ್ಣ ಎಂದು ನುಡಿದಿರುತ್ತಾರೆ. ನಿಪಿ- 1 ರಲ್ಲಿ 2 ನೇ ಪ್ರತಿವಾದಿಯ ಗಂಡನ ಹೆಸರು ಬೊಮ್ಮಣ್ಣ ಎಂದು ಬರೆದಿಲ್ಲ.

ದಾವಾ ಆಸ್ತಿಯನ್ನು ನೋಡಿದ್ದೇನೆ. ದಾವಾ ಸ್ವತ್ತಿನ ವಿಸ್ತೀರ್ಣ 4 ಎಕರೆ 17 ಗುಂಟೆ, ಪೂರ್ಣ ದಾವಾ ಆಸ್ತಿಯನ್ನು ವ್ಯಾಪಾರ ಮಾಡಲಾಯಿತು. ದಾವಾ ಆಸ್ತಿ ಸಮತಟ್ಟಾಗಿದೆ ಎಂದರೆ ಸರಿ.

ಹಳ್ಳಿಗಳಲ್ಲಿ ಇಂದು 1 ನಿವೇಶನದ (30 40 ) ಬೆಲೆ 1.50.000 ಲಕ್ಷ ರೂ. ಇದೆ ಎಂದರೆ ಸಾಕ್ಷಿದಾರರು 60-80 ಸಾವಿರ ಇದೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ಗ್ರಾಮಾಠಾಣಕ್ಕೆ ಹೊಂದಿಕೊಂಡಿದೆ ಎಂದರೆ ಸರಿ. ದಾವಾ ಸ್ವತ್ತಿನ 1 ಎಕರೆಯ ಬೆಲೆ 10 – 15 ಲಕ್ಷ ಇದೆ ಎಂದರೆ ಸರಿಯಲ್ಲ. 2006 ನೇ ಇಸವಿಯಲ್ಲಿ ದಾವಾ ಸ್ವತ್ತಿನ ಪ್ರತೀ ಎಕರೆ 4 ಲಕ್ಷ ರೂ.ಗಳಿಗಿಂತ ಹೆಚ್ಚು ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಇಂದಿನ ಬೆಲೆ ಪ್ರತೀ ಎಕರೆಗೆ 1 ಲಕ್ಷ ರೂ. ಇರಬಹುದು.

ನಿಪಿ- 1 ಕರಾರು ಬರೆದ 1 ವಾರಕ್ಕೆ ಪ್ರತಿವಾದಿ ವಾದಿಯಿಂದ 15.000 ರೂ.ಗಳನ್ನು ಪಡೆದಿದ್ದಾರೆ ಎಂದು ಗೊತ್ತಾಯಿತು. 15.000 ರೂ.ಗಳನ್ನು ವಾದಿ ಪ್ರತಿವಾದಿಗೆ ಕೊಟ್ಟಿರುವುದನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಸದರಿ 15.000 ರೂ.ಗಳನ್ನು ಪ್ರತಿವಾದಿಗಳಿಗೆ ಕೊಟ್ಟಿರುವ ಬಗ್ಗೆ ನಿಪಿ- 1 ರಲ್ಲಿ ಹಿಂಬರಹ ಬರೆಯಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ- 1 ನ್ನು ಬರೆದ ದಿನ ನೋಡಿದೆ ಆದರೆ ಇತ್ತೀಚೆಗೆ ನೋಡಿಲ್ಲ. ಪ್ರತಿವಾದಿಗಳಿಗೆ ಹಣ್ಣ ಕೊಟ್ಟಿದ್ದೇವೆ ಎಂದು ವಾದಿಯ ಗಂಡ ತಿಳಿಸಿದ್ದರು.

ಊರಿನಲ್ಲಿ 2 ಬಾರಿ ಪಂಚಾಯ್ತಿ ನಡೆದಿತ್ತು. ಮೊದಲನೆ ಪಂಚಾಯ್ತಿ ಕರಾರು ಆದ 2 ವರೆ ತಿಂಗಳಿಗೆ ನಡೆದಿದ್ದು ಸದರಿ ಪಂಚಾಯ್ತಿಯಲ್ಲಿ ನಾನು ರಘು ಮತ್ತು ವಾದಿಯ ಗಂಡ ಹೋಗಿದ್ದೆವು. ಸದರಿ ಪಂಚಾಯ್ತಿಯಲ್ಲಿ ಕ್ರಯ ಪತ್ರ ಮಾಡಿಕೊಡುತ್ತೇವೆ ಎಂದು ಹೇಳಿದರು ಆದರೆ ಮಾಡಿಸಲಿಲ್ಲ. ಮೊದಲನೇ ಪಂಚಾಯ್ತಿ ನಡೆದ 2 ದಿನಗಳ ನಂತರ 2 ನೇ ಪಂಚಾಯ್ತಿ ನಡೆದಿದೆ. 2 ನೇ ಪಂಚಾಯ್ತಿಯೂ ಸಹ ನಾನು ರಘು ಮತ್ತು ವಾದಿಯ ಗಂಡ ಹೋಗಿದ್ದೆವು. ಆಗಲೂ ಸಹ ಪ್ರತಿವಾದಿಯರು ಸಮಯ ಕೇಳಿದ್ದರು. ವಾದಿಯ ಗಂಡ ನ್ಯಾಯಾಲಯಕ್ಕೆ ಹೋಗುತ್ತೇವೆಂದು, ನಾವು ಹೋಗುವಂತೆ ತಿಳಿಸಿದರು. 2 ನೇ ಬಾರಿ ಪಂಚಾಯ್ತಿ ಮಾಡಿದ ದಿನದಂದು ನ್ಯಾಯಾಲಯಕ್ಕೆ ಹೋಗುವಂತೆ ವಾದಿಯ ಗಂಡನಿಗೆ ತಿಳಿಸಿದ್ದೆವು.

ಭೀಮಣ್ಣ ಎನ್ನುವವರು 1 ನೇ ಪ್ರತಿವಾದಿಯ ವಿರುದ್ಧ ಸಲ್ಲಿಸಿದ್ದ ಪ್ರಕರಣದ ಬಗ್ಗೆ ನಿಮಗೇನಾದರೂ ಗೊತ್ತಿದೆಯೇ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು ಭೀಮಣ್ಣನವರು ನ್ಯಾಯಾಲಯಕ್ಕೆ ಹೋಗಿರುವ ವಿವಾದ ಬಗೆಹರೆದ ನಂತರ ಕ್ರಯಪತ್ರ ಮಾಡಿಕೊಡುತ್ತೇನೆಂದು ಹೇಳಿದರು ಎಂದು ನುಡಿದಿರುತ್ತಾರೆ. ಭೀಮಣ್ಣನವರು ಪ್ರತಿವಾದಿಯ ವಿರುದ್ಧ ಯಾವ ಪರಿಹಾರಕ್ಕೆ ದಾವೆ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ.

ನಾನು ರಘುನಾಥ್ ಮತ್ತು ವಾದಿಯ ಗಂಡ ಒಂದೇ ಸಮಕಾಲಿನರು ಎಂದರೆ ಸರಿ. ಮೇಲೆ ಹೇಳಿದ ಮೂವರಿಗೂ 20-25 ವರ್ಷಗಳಿಂದ ವಿಶ್ವಾಸವಿದೆ.

ಪ್ರತಿವಾದಿಗಳಿಗೆ ಜಮೀನು ಮಾರಾಟ ಮಾಡುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ, ಪ್ರತಿವಾದಿಗಳು ಜಮೀನನ್ನು ಮಾರಾಟ ಮಾಡುವುದಕ್ಕಾಗಿ ಎಂದೂ ಬಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಚಾಪಾ ಕಾಗದ ತಂದಿಲ್ಲ ಹಾಗೂ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ- 1 ರ ಪ್ರಕಾರ ಪ್ರತಿವಾದಿಗಳಿಗೆ ಯಾವುದೇ ಹಣ ಸಂದಾಯವಾಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ವಾದಿ ಇಂದಿಗೂ ವ್ಯವಸಾಯ ಮಾಡುತ್ತಾರೆ. ವಾದಿ ಆರೋಗ್ಯವಾಗಿದ್ದಾರೆ ಎಂದರೆ ಸರಿ. ನಾನು ರಘುನಾಥ್ ಮತ್ತು ವಾದಿಯ ಗಂಡ ಸೇರಿಕೊಂಡು ವಾದಿಯ ಹೆಸರಿನಲ್ಲಿ ನಿಪಿ-1 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯ ಗಂಡನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾರಾಟದ ಬಗ್ಗೆ ಯಾವುದೇ ಮಾತುಕತೆ ನಡೆದಿಲ್ಲ, ಯಾವುದೇ ಕರಾರು ಪತ್ರ ಬರೆದುಕೊಟ್ಟಿಲ್ಲದಿದ್ದರೂ ಸಹ ವಾದಿಯ ಗಂಡ ತಂದಂತಹ ಕರಾರು ಪತ್ರಕ್ಕೆ ನಾವು ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಸಿರಾ.